# ಅಸ್ತಮಾ ಶಮನಕ ಬಾಗುವ ಗುಣವಿಲ್ಲದ ಬಾಗೆಮರ ದೇವಭಾಷೆಯಲ್ಲಿ ಶಿರೀಷ

ಪುಣ್ಯಕೋಟಿಯ ಕಥೆಯ ನಾಡಿಗೆ ಸಾರಿದ ಗೊಲ್ಲನ ಪದಗಳ ಸಾಲಿನಲಿ ಅರುಣಾದ್ರಿಯ ಗಿರಿಯ ಬೆಟ್ಟಗಳಲ್ಲಿ" ನಾಗಸಂಪಿಗೆ ಮಾವು ನೇರಳೆ ತ್ಯಾಗ ಚನ್ನಂಗಿ ಬನ್ನಿ ಪಾದರಿ ಬಾಗೆ ತಿಂತ್ರೀಣಿ ಮತ್ತೆ ಬಿಲ್ಲವೋ ತ್ತಾಗಿ ಮೆರೆದವರಣ್ಯದಿ" ಎಂದು ಬಣ್ಣಿಸಿರುವನು. ಪಂಪಾ ಸರೋವರದ ಸುತ್ತಲಿನ ಅಚ್ಚ ಹಸಿರಿನ ಮರಗಳ ಸಾಲಿನಲ್ಲಿ ಶಿರೀಷವೂ ಸೇರಿದೆ. ರಾಮಾಯಣದ ಕಿಷ್ಕಿಂದಾ ಕಾಂಡದಲ್ಲಿ ವರ್ಣಿತಗೊಂಡ ಬೃಹತ್ ವೃಕ್ಷ "ಮಚುಲಿಂದಾರ್ಜುನಶ್ಚಿವ ದೃಶ್ಯಂತೆ ಗಿರಿಸಾನುಸು/ಕೇತಕೋದ್ದಾಲಕಾವ ಶಿರೀಷಾ: ಶಿಂಶವಾ ಧವಾ://ಹೇರಳೆ ಗಿಡ, ಅರ್ಜುನ, ಕೇದಗೆ, ಸಜ್ಜೆ, ಬೀಟೆಮರಗಳ ಜೊತೆಯಲ್ಲಿ ಶಿರೀಷವೃಕ್ಷವೂ ಪಂಪಾ ಸರೋವರದ ಸೌಂದರ್ಯ ಹೆಚ್ಚಿಸಿತು.


ಚಿತ್ರ ಕೃಪೆ: ವಿಜಯ್ ಹೆಚ್

ಇದು ರಾಮಾಯಣದ ಕಿಷ್ಕಿಂದಾ ಕಾಂಡದ ಉಲ್ಲೇಖ, ಪಂಪ ತನ್ನ ಆದಿಪುರಾಣದಲ್ಲಿಯೂ ಶಿರೀಷವನ್ನ ವರ್ಣಿಸಿದ್ದಾನೆ. ಕೆತ್ತನೆ ಕೆಲಸದಲ್ಲೂ, ರೇಲ್ವೆ ಸ್ಲೀಪರ್ ತಯಾರಿಕೆಯಲ್ಲೂ ಬಳಕೆಯಾಗುವ ಪಶ್ಚಿಮಘಟ್ಟದ ಹೆಗ್ಗಾಡಿನಲ್ಲಿ ಮುಗಿಲೆತ್ತರಕೆ ಬೆಳೆಯುವ ಗಗನಚುಂಬಿ. ಶಾಸ್ತ್ರೀಯ ವನ ನಿರ್ಮಾಣದಲ್ಲೂ ಭಾಗಿಯಾಗುವ ಬಾಗೆಮರ. ಬಾಗೆಯಮರಕ್ಕೆ ಬಾಗುವ ಗುಣವಿಲ್ಲ ಎಂಬ ಗಾದೆಯನ್ನು ಸೃಷ್ಟಿಸಿದ ಗಟ್ಟಿ ತರುಕುಲ. ರಾಜನಿಘಂಟುವಿನ ಪ್ರಕಾರ ವಾತರೋಗ ಮತ್ತು ಕುಷ್ಟನಾಶಕ ಗುಣಹೊಂದಿದ ಉತ್ತಮ ಔಷಧಿಯ ಸಸ್ಯವೂ ಆಗಿದೆ ಬಾಗಮರ. ಅಸ್ತಮಾ ಶಮನಕ ಬಾಗುವ ಗುಣವಿಲ್ಲದ ಬಾಗಮರ ದೇವಭಾಷೆಯಲ್ಲಿ ಶಿರೀಷ.

ಭಾರತ ಮತ್ತು ಮಾಯನ್ಮಾರಗೆ ಸ್ಥಳೀಯವಾಗಿರುವ ಶೀರಿಷದ ಸಸ್ಯಕುಟುಂಬ ಮಿಮೋಸೇಸಿ. ಅಲ್ಬಿಜಿಯಾ ಲೆಬಕ್ ಇದರ ವೈಜ್ಞಾನಿಕ ಹೆಸರು. ಕಲ್ಲಾಗೆ, ಚಿಲಬಾಗೆ, ಎಲೆಸುಜ್ಜಲು ಗೊಡ್ಡುಹುಣಸೆ, ದೊಡ್ಡಶಿರಿಷ, ಸಿರಿಸಲ, ಹೊಂಭಾಗೆ, ಬಿಲ್ವಾರ ಎಂಬುದು ಮಾತೃಭಾಷೆಯ ನಾಮಗಳು. ಬಾಗೆಮರದ ಕಾಂಡದ ಮೇಲಿನ ತೊಗಟೆಯನ್ನು ತೆಗೆದ ನಂತರ ಒಳಗಿನ ಹೊಂಬಣ್ಣ ಕಾಂಡ ಕಾಣುವದರಿಂದ ಹೊಂಬಾಗೆ ಎಂದು. ಮರ ಬರಡು ಬಯಲಿನಲ್ಲಿ ಕಲ್ಲು ಗುಟ್ಟೆಗಳಿರುವ ಪ್ರದೇಶದಲ್ಲಿ ಬೆಳೆಯುವದರಿಂದ ಕಲ್ದಾಗೆ ಎಂದು ಕರೆಯುವರು.

ಈ ಮರದಲ್ಲಿ ತುಂಬಾ ಬಗೆಯ ಕೀಟಗಳು ನೆಲೆಸುವದರಿಂದ ಇಂಗ್ಲಿಷಿನಲ್ಲಿ (ಪ್ಲಿಯ ಎಂದರೆ ಕೀಟ) ಪ್ಲಿಯ ಟೀಲೆಬ್ಬೆಕ್, ಕಾಯಿಗಳು ನಾಲಿಗೆಯನ್ನು ಹೋಲುವದರಿಂದ ವುಮನ್ಸ್ ಟಂಗ್ ಟ್ರೀ ಎಂದು ಒಣಗಿದ ಕಾಯಿಗಳು ಗಾಳಿಬೀಸಿದಾಗ ಶಬ್ದ ಮಾಡುವದರಿಂದ (ರ್ಯಾಟ್ಸ ಎಂದರೆ ಸದ್ದು ಮಾಡುವ ಪಾಡ್ ಎಂದರೆ ಕಾಯಿ) ಕ್ಯಾಟ ಪ್ಯಾಡ್ ಎನ್ನುವರು. ಹೂವಿನ ಕಾಲದಲ್ಲಿ ಮರದ ತುಂಬಾ ಹೂವುಗಳಿರುವದರಿಂದ, ಮರ ಪ್ರಕೃತಿ ಮಾತೆಯ ಶಿರಕೆ ಹೂವಿನ ಕಾಣಿಕೆ ಅರ್ಪಿಸಲು ಸಜ್ಜಾಗಿದೇಯೋ ಎನ್ನುವಂತೆ ಭಾಸವಾಗುವದರಿಂದ ಶಿರೀಷ ಎಂದು ಕರೆಯುತ್ತಾರೆ. ಬಾಗೆಮರದ ಅಲ್ಬಿಜಿಯಾ ಎಂಬ ಜಾತಿ ಸೂಚಕ ಹೆಸರನ್ನು ಪ್ರಖ್ಯಾತ ಇಟಲಿ ದೇಶದ ಸಸ್ಯಶಾಸ್ತ್ರಜ್ಞ ಅಲ್-ಬೀಜಿ ಎಂಬುವವರ ಗೌರವಾರ್ಥ ಇಡಲಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ಬಾಗೆಮರವನ್ನು ಲೆ-ಬೆಕ್ ಎಂದು ಕರೆಯುತ್ತಾರೆ. ಈ ಹೆಸರನ್ನು ಲ್ಯಾಟಿನಿಕರಿಸಿ ಲೆಬ್ಬೆಕ್ ಎಂದು ನಾಮಕರಣ ಮಾಡಲಾಗಿದೆ.ಹಿಂದಿಯಲ್ಲಿ ಸಿರಿಷ್, ತಮಿಳಿನಲ್ಲಿ ವಾಗೈ, ತೆಲುಗಿನಲ್ಲಿ ದಿರಿಶನಮು ಎಂದು ಕರೆಯುವರು. ಹೂವುಗಳು ಹಳದಿ ಬಣ್ಣದಿಂದ ಕೂಡಿ ಮಂಗನ ಬಣ್ಣವನ್ನು ಹೋಲುವದರಿಂದ ಕಪಿತನ ಎಂದು, ಹೂವುಗಳು ಮೃದುವಾಗಿರುವುದರಿಂದ ಮೃದುಪುಷ್ಟ ಎಂದು, ಹೂವುಗಳು ಪಕ್ಷಿಗಳ ಕೊಕ್ಕಿನಂತೆ ಭಾಸವಾಗುವದರಿಂದ ಶುಕಪಿರ್ಯ, ಶುಕಪುಷ್ಪವೆಂದು, ಭಂಡಿರಾ, ಭಂಡಿಲಾ, ಶುಕತರು, ವಿಷನಾಶನ, ಶೀತಪುಷ್ಪ,ಸ್ವರ್ಣಪುಷ್ಕಕ ಎಂಬುದು ಸಂಸ್ಕೃತದ ನಾಮಕರಣಗಳಾಗಿವೆ.

ಧನ್ವಂತರಿನಿಘಂಟು, ಚರಕ ಸಂಹಿತೆ, ಸುಶ್ರುತ ಸಂಹಿತೆ, ರಾಮಾಯಣ, ಮತ್ಸ್ಯಪುರಾಣ, ಬೃಹತ್ಸಂಹಿತೆ, ಅಷಾಂಗ ಹೃದಯ, ಆದಿಪುರಾಣ ಗ್ರಂಥಗಳಲ್ಲಿ ಶೀರಿಷದ ಉಲ್ಲೇಖವಿದೆ. ಮಹಾಭಾರತದಲ್ಲಿ ಸರಸ್ವತಿ ನದಿ ತೀರದ ವೃಕ್ಷಗಳ ಪೈಕಿ ಶಿರೀಷವೂ ಒಂದಾಗಿದೆ. ಕನ್ನಡದ ಕಾವ್ಯಗಳಾದ ಅಭಿನವ ಮಂಗರಾಜ ಬರೆದ ಕಾವ್ಯ ಸಿರಿಸಲ,ಶಿರಿಸಮನೆ ಬಾಗೆ" ಎಂದು. ನಯಸೇನನ ಧರ್ಮಾಮೃತದಲ್ಲಿ ಬಾಗೆಯಂತೆ ನಿಸ್ಸಾರವಾಗಿ ಅಶೋಕೆಯಂತೆ ನಿಷ್ಪಲನಾಗಿ" ಎಂದು ಉಲ್ಲೇಖ ದೊರೆಯುತ್ತದೆ. ಬಾಗೆಮರದ ಹೆಸರಿನಲ್ಲಿ ಬಾಗೆವಾಡಿ, ಬಾಗೇಶಮರ, ಬಾಗೆಯಾರ್ ಎಂಬ ಊರುಗಳಿದೆ.ಬಾಗೇಶ್ವರಿ ಎಂಬುದು ಸಂಗೀತದ ಒಂದು ರಾಗದ ಹೆಸರು ಆಗಿದೆ. "ಸೀಗೆಬಾಗೆಯ ಬೇರು ಕಾಗೆ ಮೋರೆಯ ಗಡ್ಡೆ ನಾಗರ ಸತುವನೊಡಗೂಡೆ ಹೇಮ ತಾ ನಾಗಲೇ ಬೇಕು ಸರ್ವಜ್ಞ" ಬಾಗೆಯ ಮರದ ಕುರಿತು ಸರ್ವಜ್ಞನ ವಚನವಿದು. ಉತ್ತರಕನ್ನಡದ ಘಟ್ಟದ ಮೇಲಿನ ಶಿರಸಿಯ ಪ್ರದೇಶದಲ್ಲಿ ಶಿರೀಷ (ಸಿರಿಸ) ಮರಗಳು ಹೆಚ್ಚಾಗಿ ಕಾಣಸಿಗುತ್ತಿದ್ದರಿಂದ ಸಿರಿಸೆ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಕಾಲಕ್ರಮೇಣ ಇದು ಸಿರಸಿಯಾಗಿ ಅನಂತರ ಸಿರ್ಸಿಯಾಗಿ ಬಳಕೆಗೆ ಬಂದಿತು ಎನ್ನಲಾಗಿದೆ..ಏಳನೆಯ ತೀರ್ಥಂಕರರಾದ ಶ್ರೀ ಸುಪಾರ್ಶ್ವನಾಥ ತೀರ್ಥಂಕರರು ಶಿರೀಷ ವೃಕ್ಷದ ಕೆಳಗೆ ಕೇವಲ ಜ್ಞಾನ ಪಡೆದಿರುವ ಕಾರಣ ಶಾಸ್ತ್ರೀಯ ವನಗಳಾದ ತೀರ್ಥಂಕರರ ವನ ನಿರ್ಮಾಣದಲ್ಲಿ ಅವರ ಪ್ರತಿನಿಧಿಯಾಗಿ ಶಿರೀಷ ವೃಕ್ಷವನ್ನು ವೃಕ್ಷಾರೋಪಣ ಮಾಡುವ ಪದ್ಧತಿಯಿದೆ. ಶತೌಷಧಿವನ ನಿರ್ಮಾಣದಲ್ಲೂ ಶಿರೀಷವೃಕ್ಷವನ್ನು ನೆಡುವಂತೆ ತಿಳಿಸಿದೆ. ಮನೆಗಳನ್ನು ಕಟ್ಟುವ ಮೊದಲು ನಿಶ್ಚಿತ ಮರಗಳನ್ನು ಬೆಳಸುವದು ಶುಭಪ್ರದಾದು ಎಂದು ವನ್ಯಶಾಸ್ತ್ರ ಸಂಹಿತೆಯಲ್ಲಿ ಬರೆಯಲಾಗಿದೆ.

ಅರಿಷ್ಟಾಶೋಕಪುನ್ನಾಗಶಿರೀಷಾ: ಸಪ್ರಿಯಂಗವ:/ ಮಂಗಲ್ಯಾ: ಪೂರ್ವಮಾರಾಮೇ ರೂಪಣೀಯಾ ಗೃಹೇಷು ವಾ//" ಕಹಿಬೇವಿನಮರ, ಅಶೋಕ, ಪುನ್ನಾಗ, ಶಿರೀಷ, ಪ್ರಿಯಂಗು ವೃಕ್ಷಗಳನ್ನು ಉದ್ಯಾನ ಅಥವಾ ಮನೆಗಳನ್ನು ನಿರ್ಮಿಸುವ ಪೂರ್ವದಲ್ಲಿ ವೃಕ್ಷಾರೋಪಣ ಮಾಡಿದರೆ ಶುಭವಾಗುವದು. ಹಾಗೇಯೇ ವಾಸದ ಮನೆಯ ಸುತ್ತಲೂ ಇರಬೇಕಾದ ವೃಕ್ಷಗಳಲ್ಲಿ ಶೀರಿಷವೂ ಒಂದು. ಮನೆಯ ಪೂರ್ವ ಆಗ್ನೇಯಾ ಮತ್ತು ದಕ್ಷೀಣ ಆತ್ಮೀಯ ದಿಕ್ಕಿನಲ್ಲಿ ಶಿರೀಷ ವೃಕ್ಷವನ್ನು ವೃಕ್ಷಾರೋಪಣ ಮಾಡಬೇಕೆಂದು ಗ್ರಂಥಗಳಲ್ಲಿ ದಾಖಲೆಯಿದೆ. ಬೌದ್ಧ ಧರ್ಮದವರಿಗೆ ಇದು ಪವಿತ್ರ ವೃಕ್ಷವಾಗಿದೆ. ಬಹುಬೇಗ ಬೆಳವಣಿಗೆ ಹೊಂದುವ ಮರನ್ನು ರಸ್ತೆಯ ಸಾಲುಮರಗಳಿಗಾಗಿ ನೆಡಲು ಯೋಗ್ಯವಾಗಿದೆ.

ಒನಕೆ ವರಳು, ಕಬ್ಬಿನ ಗಾಣ,ಎಣ್ಣೆಗಾಣ, ಲಾರಿಗಳ ಬಾಡಿ ಕಟ್ಟಲು, ಗೃಹ ನಿರ್ಮಾಣದಲ್ಲಿ, ಪೀಠೋಪಕರಣ, ಗೃಹ ಉಪಕರಣ, ರೇಲ್ವೆ ಕ್ಯಾರಿಯೇಜ್, ಬೆಂಕಿ ಪೆಟ್ಟಿಗೆ, ಕಾಗದ ತಯಾರಿಕೆಗಳಲ್ಲಿ ಈ ಮರವನ್ನು ಬಳಸಲಾಗುತ್ತದೆ. ತೊಗಟೆ ಪುಡಿಯನ್ನು ಸಾಬೂನಿನಂತೆ ಬಳಸುವ ಕ್ರಮವಿದೆ. ಇದರ ಎಲೆಗಳು ದನಗಳಿಗೆ ಜಾನುವಾರುಗಳಿಗೆ ಉತ್ತಮ ಮೇವು ಎಂಬ ವರದಿಯಿದೆ. ಪಂಪನ ಆದಿಪುರಾಣದಲ್ಲಿ "ಸರಿಸದ ಬಾಸಿಗ" ಎನ್ನುತ್ತಾನೆ ಪಂಪ ಹೂವುಗಳಿಂದ ಆಭರಣ ಮಾಡಿಕೊಂಡು ಕಿವಿಗೆ ಧರಿಸುವದು ಒಂದು ಜಾನಪದ ಪದ್ಧತಿಯಾಗಿತ್ತೆಂದು ತಿಳಿಸುತ್ತಾನೆ.

ಶಿರೀಷವು ಪ್ರಮುಖ ವಿಷ ನಿವಾರಕ ಗಿಡಮೂಲಿಕೆಯಾಗಿದೆ. ಇದರ ಹೂವನ್ನು ಹಿಂಡಿ ರಸ ತೆಗೆಯಲಾಗುತ್ತದೆ.

ಇದನ್ನು ಕರಿಮೆಣಸು ಮತ್ತು ಸಕ್ಕರೆಯೊಂದಿಗೆ ಬೆರೆಸಿ ಮೂಗಿನ ಒಳ ಸೇರಿಸಲು ಮತ್ತು ಹಾವು ಕಡಿತದಲ್ಲಿ ಬಾಯಿಯ ಮೂಲಕ ಸೇವಿಸಲು ಬಳಸಲಾಗುತ್ತದೆ ಎಂದು ಚರಕ ಸಂಹಿತೆಯ ಚಿಕಿತ್ಸಾಸ್ಥಾನದ 25 ನೇ ಅಧ್ಯಾಯದಲ್ಲಿ ಬರೆಯಲಾಗಿದೆ. ಉರಿಯೂತವನ್ನು ನಿವಾರಿಸುತ್ತದೆ.ಅಸ್ತಮಾ, ಕುರು ಮತ್ತು ಬಾವು, ಹಲ್ಲು ನೋವು, ಪ್ರದರರೋಗ, ಚರ್ಮರೋಗಳಿಗೆ, ಚೇಳು, ಜೇನುಹುಳು ಇಲಿಗಳ ಕಡಿತದ ವಿಷ ಪರಿಹಾರಕೆ ವಿವಿಧ ಬಗೆಯ ಜ್ವರಗಳಿಗೆ ಉತ್ತಮ ಔಷಧವಾಗಿದೆ. ತೊಗಟೆ, ಬೀಜ, ಬೇರು, ಹೂವು ಔಷಧಿಯ ಭಾಗಗಳಾಗಿದೆ. ದಶಾಂಗ್ ಲೇಪ, ಆಯಸ್ಕೃತಿ, ಬೃಹತ್ ಮರಿಚಾದಿ ತೈಲ, ದೇವದರ್ವಿಷ್ಣ, ಶಿರೀಷಾರಿಷ್ಠ ಇವು ಶಿರೀಷಯುಕ್ತ ಆಯುರ್ವೇದೀಯ ಔಷಧಗಳು.

ಬಾಗೆಯು ತುಂಬಾ ಸಹಜವಾದ ಪರಿಸರ ಮೌಲ್ಯಗಳನ್ನು ಕಟ್ಟಿಕೊಡುವ ಮರ. ಮುಟ್ಟಿದರೆ ಮುನಿ ಸಸ್ಯದ ಕುಟುಂಬಕೆ ಸೇರಿದ, ಸಾರಜನಕವನ್ನು ಸ್ಥಿರಿಕರಿಸುವ ಮಣ್ಣನ್ನು ಹಿಡಿದಿಟ್ಟುಕೊಂಡು, ನೆಲದ ಫಲವತ್ತತೆಯನ್ನು ಹಿಗ್ಗಿಸಬಲ್ಲ ಮರ. ಬೀಜಗಳಿಂದ ಸ್ವಾಭಾವಿಕ ಪುನರುತ್ಪನ್ನ ಪಡೆಯಬಹುದು, ಸಹ್ಯಾದ್ರಿಯ ತಪ್ಪಲಿನಲಿ ಬೆಳೆಯಬಲ್ಲ ದೊಡ್ಡ ಗಾತ್ರದ ಮರಗಳಲ್ಲಿ ಬಾಗೆ ಮರವೂ ಸೇರಿದೆ. ಇಂಥಹ ಅಪರೂಪದ ಮರಗಳು ನಾಶವಾಗುವ ಮೊದಲು ಸಂರಕ್ಷಿಸುವ ಕಾರ್ಯ ಮಾಡೋಣ. ಬಾಗೆ ಮರಕ್ಕೊಮ್ಮೆ ಬಾಗಿ ನಮಿಸೋಣ.

**ಉಮಾಪತಿ ಭಟ್ಟ ಕೆವಿ**
**ರಾಜ್ಯ ಸಂಯೋಜಕರು, ಪರಿಸರ ವಿಭಾಗ,**
**ಯೂತ್ ಫಾರ್ ಸೇವಾ ಬೆಂಗಳೂರು.**